**OS: 107/2015**
**D.W-1**

**<u>ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕೂಡ್ಲಿಗಿ</u>**

ದಿನಾಂಕಃ 24.04.2026 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**<u>ಮುಂದುವರೆದ ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರಿಂದಃ</u>**

ದಿಃ 02.04.2013 ರ ನೊಂದಾಯಿತವಲ್ಲದ ಪಾಲುಪಟ್ಟಿ ದಾಖಲೆಯನ್ನು ಹಾಜರುಪಡಿಸಿದ್ದು (ಸದರಿ ದಾಖಲೆಯನ್ನು ಮುಖ್ಯ ಉದ್ದೇಶಕ್ಕೆ ಅಲ್ಲದೆ ಅನುಷಂಗಿಕ ಉದ್ದೇಶಕ್ಕಾಗಿ ಮಾತ್ರ) ಅದನ್ನು ನಿ.ಡಿ- 35 ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ಮೃತ 1ನೇ ವಾದಿ ಬಸಪ್ಪರವರು ಸಹಿ ಮಾಡಿದ್ದು ಅವರ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. 1(ಎ) ವಾದಿಯ ಹೆಬ್ಬೆಟ್ಟಿನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಗೆ ಸಾಕ್ಷಿಯಾಗಿ ಭೀಮ, ಭಂಡಾರಿ ಶಿವಪ್ಪ, ಕೊತ್ಲಪ್ಪ, ಮುತ್ತುರವರು ಸಹಿ ಮಾಡಿರುತ್ತಾರೆ. ಸದರಿ ದಾಖಲೆಯನ್ನು ವಿರೂಪಾಕ್ಷಪ್ಪರವರು ಬರೆದಿರುತ್ತಾರೆ. ಸದರಿ ದಾಖಲೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಡಿ 35-ಎ ಎಂದು ಗುರುತಿಸಲಾಯಿತು. ಸದರಿ ದಾಖಲೆಯನ್ನು ಮೃತ 1ನೇ ವಾದಿ ಮತ್ತು 1(ಎ) ವಾದಿಯವರು ಬರೆಸಿರುತ್ತಾರೆ. ಮೃತ 1ನೇ ವಾದಿ ಬಸಪ್ಪರವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಡಿ 35-ಬಿ ಎಂದು ಗುರುತಿಸಲಾಯಿತು.

(ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

**ಓ,ಹೇ,ಕೇ,ಸರಿ ಇದೆ.**

**ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ಕೂಡ್ಲಿಗಿ.**